HOSA DIGANTHA

Tuesday, September 06, 2011

JGI JAIN UNIVERSITY - CMS
CPL T20 2011
COLLEGE PREMIER LEAGUE

ಕಾಲೇಜ್‌ಗೂ ಲಗ್ಗೆ ಇಟ್ಟ ಲೀಗ್ ಕ್ರಿಕೆಟ್..!

ಕ್ರಿಕೆಟ್‌ಗೆ ಕಾರ್ಪೋರೇಟ್ ಟಚ್ ನೀಡುತ್ತಾ, ಭಾರತೀಯ ಕ್ರಿಕೆಟ್ ಅಭಿಮಾನಿಗಳನ್ನು ಸೂಜಿಗಲ್ಲಿನಂತೆ ತನ್ನತ್ತ ಆಕರ್ಷಿಸಿರುವ 'ಲೀಗ್' ಕ್ರಿಕೆಟ್ ಇಂದು ಸರ್ವವಲಯಗಳಲ್ಲಿ ಸಹ ತನ್ನ ಪ್ರಭಾವವನ್ನು ಬೀರಿದೆ. ಇಂಗ್ಲಂಡ್ ಮತ್ತು ಯೂರೋಪಿಯನ್ ಲೀಗ್ ಫುಟ್ಬಾಲ್‌ನಂತೆ, ಭಾರತದಲ್ಲಿ ಕ್ರಿಕೆಟ್ ಲೀಗ್ ಆರಂಭವಾಗಿದ್ದೇ ತಡ ಮೊದಲ ಯತ್ನದಲ್ಲಿಯೇ ಅದ್ಭುತ ಯಶಸ್ಸು ಕಂಡು, ಭಾರಿ ವೇಗದಲ್ಲಿ ಮುನ್ನುಗ್ಗುತ್ತಿದೆ.

2008ರಲ್ಲಿ ಮೊಟ್ಟಮೊದಲ ಬಾರಿಗೆ ಕ್ರಿಕೆಟ್‌ಗೆ ಕಾರ್ಪೋರೇಟ್ ಟಚ್ ನೀಡಿದ ಲಲಿತ್ ಮೋದಿಯ ಯತ್ನ ಮೊದಲ ಹಂತದಲ್ಲಿಯೇ ಯಶಸ್ಸು ಕಂಡಿದ್ದೇ ತಡ, ಇಂಡಿಯನ್ ಪ್ರೀಮಿಯರ್ ಲೀಗ್, ಹತ್ತು ಹಲವು ವಲಯಗಳಲ್ಲಿ, ಅಂತಾರಾಷ್ಟ್ರೀಯ ಹಂತದಲ್ಲಿ ಭಾರಿ ಮನ್ನಣೆಯನ್ನು ಪಡೆಯಿತು. ಇದರ ಯಶಸ್ಸನ್ನು ಕಂಡ, ಅನೇಕ ಕ್ರೀಡಾ ಸಂಸ್ಥೆಗಳು, ಐಪಿಎಲ್ ಮಾದರಿಯಲ್ಲಿಯೇ ತಮ್ಮ ತಮ್ಮ ಮಟ್ಟದಲ್ಲಿ ಲೀಗ್ ಹಂತಗಳನ್ನು ಆರಂಭಿಸಿ ಕ್ರಿಕೆಟ್‌ಗೆ ಜೈ ಅನ್ನುತ್ತಿದ್ದಾರೆ.

ಐಪಿಎಲ್‌ನಂತೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಮೂರು ವರ್ಷಗಳ ಹಿಂದೆ ಕರ್ನಾಟಕ ಪ್ರೀಮಿಯರ್ ಲೀಗ್ (ಕೆಪಿಎಲ್) ಆರಂಭವಾಯಿತು. ರಾಜ್ಯದ ವಿವಿಧ ಮೂಲೆ ಮೂಲೆಗಳಲ್ಲಿರುವ ಗ್ರಾಮೀಣ ಪ್ರತಿಭಾವಂತ ಕ್ರಿಕೆಟಿಗರನ್ನು ಹೆಕ್ಕಿ ತೆಗೆಯುವಲ್ಲಿ ಕೆಪಿಎಲ್ ಪ್ರಮುಖ ಪಾತ್ರ ನಿರ್ವಹಿಸುತ್ತಿದೆ. ಜೊತೆಗೆ ಆಟಗಾರರಿಗೆ ಕೈಮೆಲಾ ಹಣದ ಥೈಲಿಯೂ ಸಹ ದೊರೆಯುತ್ತಿದೆ. ಐಪಿಎಲ್, ಕೆಪಿಎಲ್ ಯಶಸ್ಸನ್ನು ಮನಗಂಡ ಭಾರತೀಯ ಚಿತ್ರೋದ್ಯಮ ವಲಯ ಕಳೆದ ವರ್ಷ ಸೆಲೆಬ್ರಿಟಿ ಕ್ರಿಕೆಟ್ ಲೀಗ್ ಆರಂಭಿಸುವ ಮೂಲಕ ಕ್ರಿಕೆಟ್‌ಗೆ ತಾರಾ ಮೆರಗನ್ನು ನೀಡಿದರು.

ಇದೀಗ ಇಂತಹುದೇ ವಲಯ ಕ್ರಿಕೆಟ್ ಮತ್ತಷ್ಟು ಉತ್ತೇಜನ ನೀಡುವ ನಿಟ್ಟಿನಲ್ಲಿ ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಕಾಲೇಜು ವಲಯದಲ್ಲಿ ಟಿ-20 ಕ್ರಿಕೆಟ್ ಲೀಗ್ ಆರಂಭಿಸಿದ ಕೀರ್ತಿ ಬೆಂಗಳೂರಿನ ಪ್ರತಿಷ್ಠಿತ ಜೈನ್ ಯೂನಿವರ್ಸಿಟಿಗೆ ಲಭಿಸಲಿದೆ.

ದೇಶದಲ್ಲಿಯೇ ಕ್ರೀಡಾ ವಲಯದಲ್ಲಿ ಸಾಕಷ್ಟು ಸುದ್ದಿ ಮಾಡಿದ ಸಂಸ್ಥೆ ಜೈನ್ ಯೂನಿವರ್ಸಿಟಿ. ಪ್ರಾಥಮಿಕ ಹಂತದಲ್ಲಿಯೇ ಕ್ರೀಡಾಳುಗಳಿಗೆ ಉತ್ತೇಜನ ನೀಡುತ್ತಾ, ಅವರನ್ನು ಅಂತಾರಾಷ್ಟ್ರೀಯ ಮಟ್ಟಕ್ಕೇರುವವರೆಗೂ ಸಾಕಷ್ಟು ಕಾಳಜಿ ವಹಿಸುವ ಜೈನ್ ವಿಶ್ವವಿದ್ಯಾಲಯ ಹಂತಕ್ಕೆ ಆದ್ಯಾನಿಯಂತಹ ವಿಶ್ವದ ಟಾಪ್ ಸೂಪರ್ ಶಿಬಿರವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಎದುರಾಳಿ ಬೌಲರ್‌ಗಳಿಗೆ ನಡುಕ ಹುಟ್ಟಿಸುತ್ತಿರುವ ರಾಬಿನ್ ಉತ್ತಪ್ಪ, ಮನೀಷ್ ಪಾಂಡೆಯಂತಹ ಶ್ರೇಷ್ಠ ಬ್ಯಾಟ್ಸಮನ್‌ಗಳನ್ನ ಮತ್ತು ಇದೀಗ ಇಂಗ್ಲೆಂಡ್ ಪ್ರವಾಸದಲ್ಲಿರುವ ಭಾರತೀಯ ತಂಡದಲ್ಲಿ ವೇಗವಾಗಿ ಕಾಣಿಸಿಕೊಳ್ಳಲಿರುವ 'ಅರುಣ್ ವರುಣ್' ರಂತಹ ಯುವ ಕ್ರಿಕೆಟಿಗರನ್ನು ದೇಶಕ್ಕೆ ಪರಿಚಯಿಸಿ ಜೈನ್ ವಿಶ್ವವಿದ್ಯಾಲಯ ಇದೀಗ ದೇಶದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಕಾಲೇಜ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಆರಂಭಿಸುವ ಮೂಲಕ ಕ್ರೀಡಾ ವಲಯದಲ್ಲಿ ಭಾರಿ ಸಂಚಲನ ಮೂಡಿಸಿದೆ.

ದೇಶದ 13 ನಗರಗಳ ಪ್ರತಿಷ್ಠಿತ 24 ಕಾಲೇಜ್‌ಗಳು ಮೊದಲ ಆವೃತ್ತಿಯ ಸಿಪಿಎಲ್ (ಕಾಲೇಜ್ ಪ್ರೀಮಿಯರ್ ಲೀಗ್)ಗೆ ಸಾಕ್ಷಿಯಾಗಲಿವೆ. ಇದೇ ಸೆಪ್ಟೆಂಬರ್ 18ರಿಂದ ಆರಂಭವಾಗುವ ಟೂರ್ನಿ 25ರ ವರೆಗೆ ನಡೆಯಲಿದೆ.

ಅಂತಾರಾಷ್ಟ್ರೀಯ ಮಾಜಿ ಕ್ರಿಕೆಟಿಗರಾದ ಎಸ್. ವಿಶ್ವನಾಥ್, ಸುನಿಲ್ ಜೋಷಿ ಮತ್ತು ವಿಜಯ್ ಭಾರದ್ವಾಜ್ ಈಗಾಗಲೇ ಸಿಪಿಎಲ್‌ಗೆ ಬಾಲನೆ ನೀಡುವ ಮೂಲಕ ಈ ಟೂರ್ನಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಜೊತೆಗೆ ಅನಿಲ್ ಕುಂಬ್ಳೆ ಮತ್ತು ಕಾಲೇಜಿನ ಹಾಲಿ ವಿದ್ಯಾರ್ಥಿಗಳಾಗಿ ವಿದ್ಯಾವಂತ ಹೆಸರು ಮಾಡಿರುವ ರಾಬಿನ್ ಉತ್ತಪ್ಪ ಮತ್ತು ಮನೀಷ್ ಪಾಂಡೆ ಸಹ ಟೂರ್ನಿಯಲ್ಲಿ ವಿವಿಧ ಕಾಲೇಜಿನ ಯುವ ಕ್ರಿಕೆಟಿಗರನ್ನು ಹುರಿದುಂಬಿಸಲಿದ್ದಾರೆ.

ಈ ಟೂರ್ನಿಯಲ್ಲಿ ಪಾಲ್ಗೊಳ್ಳುವ ಹೊರ ರಾಜ್ಯದ ತಂಡಗಳೆಂದರೆ ಹೈದ್ರಾಬಾದಿನ ಆರೋರಾ, ಜಾರ್ಖಂಡ್‌ನ ಮಾರ್‌ವಾರಿ, ಮುಂಬೈನ ರಿಯ್ಯಿ, ಚೆನ್ನೈನ ಲೋಯಲಾ, ಕೋಲ್ಕತ್ತಾದ ಜಾಧವ್‌ಪುರ್, ದೆಹಲಿಯ ಹಿಂದೂ, ಕೊಚ್ಚಿಯ ಮಹಾರಾಜಾ, ಪುಣೆಯ ಎಸ್.ಪಿ ಕಾಲೇಜ್‌ಗಳು ಬೆಂಗಳೂರಿಗರಿಗೆ ಒಂದು ವಾರ ಕ್ರಿಕೆಟ್ ಹಬ್ಬದ ವಾತಾವರಣವನ್ನು ತಂದು ಕೊಡಲಿವೆ. ಇನ್ನೂ ರಾಜ್ಯದ ಪ್ರತಿಷ್ಠಿತ ಜೈನ್ ವಿಶ್ವವಿದ್ಯಾಲಯ, ಬೆಂಗಳೂರಿನ ಬಾಲ್ಡವಿನ್, ಪ್ರೆಸಿಡೆನ್ಸಿ ಕ್ರೈಸ್ಟ್, ಪಿ.ಇ.ಎಸ್.ಎಸ್.ಇ, ಕ್ರಿಸ್ತು ಜಯಂತಿ, ಜೈನ್ ಸಿಎಮ್‌ಎಸ್.ಸೆಂಟ್ ಜೋಸೆಫ್, ಸುರಾನಾ, ಜಯಾ, ಆಲ್ ಅಮೀನ್, ಆರ್‌ವಿ ಕಾಲೇಜ್‌ಗಳು ಈ ಪ್ರತಿಷ್ಠಿತ ಇಂಟರ್ ಕಾಲೇಜ್ ಪ್ರೀಮಿಯರ್ ಲೀಗ್‌ನಲ್ಲಿ ಪಾಲ್ಗೊಳ್ಳಲಿವೆ. ಇನ್ನೂ ಮೈಸೂರಿನ ಜೆ.ಜೆ.ಐ ಕಾಲೇಜ್, ಹುಬ್ಬಳ್ಳಿಯ ಜೆ.ಎಸ್.ಎಸ್., ಬೆಳಗಾವಿಯ ಜೈನ್ ಕಾಲೇಜ್ ಮತ್ತು ಮಂಗಳೂರಿನ ಎಸ್.ಡಿ.ಎಂ ಕಾಲೇಜ್‌ಗಳು ಹೊರರಾಜ್ಯಗಳ ಕ್ರಿಕೆಟ್ ತಂಡಗಳಿಗೆ ಭಾರಿ ಸವಾಲು ನೀಡಲಿವೆ.

ನಾಕೌಟ್ ಮತ್ತು ಲೀಗ್ ಹಂತದ ಎಲ್ಲಾ ಪಂದ್ಯಗಳು ಹೊಸೂರು ರಸ್ತೆಯ ಕೋರಮಂಗಲದ ಸೆಂಟ್ ಜಾನ್ ಮೆಡಿಕಲ್ ಕಾಲೇಜ್ ಮೈದಾನದಲ್ಲಿ ನಡೆದರೆ, ಸೆಮೀಸ್ ಮತ್ತು ಫೈನಲ್ ಪಂದ್ಯಗಳು ಜಯಮಹಲ್ ಒಡಾವಳೆಯ ಎನ್.ಆರ್.ಎ ಮೈದಾನದಲ್ಲಿ ನಡೆಯಲಿವೆ ಎಂದು ಜೈನ್ ಕಾಲೇಜ್‌ನ ಸಾರ್ವಜನಿಕ ಸಂಪರ್ಕಾಧಿಕಾರಿ ಅರ್ಚನಾ ಪ್ರಸಾದ್ ಮತ್ತು ಜ್ಯೋತಿ ಎಸ್. ತಿಳಿಸಿದ್ದಾರೆ.

ಕಾಲೇಜ್ ಮಟ್ಟದ ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸಿ ಬೆನ್ನುತಟ್ಟುವ ಮೂಲಕ ಭಾರತೀಯ ಕ್ರಿಕೆಟ್ ತಂಡದ ಕದ ತಟ್ಟುವಂತೆ ಮಾಡುತ್ತಿರುವ ಜೈನ್ ವಿಶ್ವವಿದ್ಯಾಲಯದ ಈ ಪ್ರಯತ್ನ ನಿರೀಕ್ಷೆ ಎಷ್ಟರ ಮಟ್ಟಿಗೆ ಯಶಸ್ಸು ಗಳಿಸಲಿ. ಗ್ರಾಮೀಣ ಯುವ ಕ್ರಿಕೆಟಿಗರಿಗೆ ಸಮರ್ಪಣೆಯಾಗಿ ಈ ಟೂರ್ನಿ ಹೊರಹೊಮ್ಮಲಿ ಎಂದು ಹಾರೈಸೋಣ.

ಐಪಿಎಲ್, ಕೆಪಿಎಲ್ ಯಶಸ್ಸನ್ನು ಮನಗಂಡ ಭಾರತೀಯ ಚಿತ್ರೋದ್ಯಮ ವಲಯ ಕಳೆದ ವರ್ಷ ಸೆಲೆಬ್ರಿಟಿ ಕ್ರಿಕೆಟ್ ಲೀಗ್ ಆರಂಭಿಸುವ ಮೂಲಕ ಕ್ರಿಕೆಟ್‌ಗೆ ತಾರಾ ಮೆರಗನ್ನು ನೀಡಿದರು. ಇದೀಗ ಇಂತಹುದೇ ವಲಯ ಕ್ರಿಕೆಟ್ ಮತ್ತಷ್ಟು ಉತ್ತೇಜನ ನೀಡುವ ನಿಟ್ಟಿನಲ್ಲಿ ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಕಾಲೇಜು ವಲಯದಲ್ಲಿ ಟಿ-20 ಕ್ರಿಕೆಟ್ ಲೀಗ್ ಆರಂಭಿಸಿದ ಕೀರ್ತಿ ಬೆಂಗಳೂರಿನ ಪ್ರತಿಷ್ಠಿತ ಜೈನ್ ಯೂನಿವರ್ಸಿಟಿಗೆ ಲಭಿಸಲಿದೆ.

ಮಂಜುನಾಥ ಬಂಡಿ